# ಕೋಟಿ ಚೆನ್ನಯ:
# ಎರಡು ನಾಟಕಗಳು-ಚಲನಚಿತ್ರ ಒಂದು ತುಲನಾತ್ಮಕ ಅಧ್ಯಯನ

**ಪ್ರಶಾಂತಿ ಬಿ.***

**DOI: https://doi.org/10.5281/zenodo.22107454**

**ABSTRACT**

ಆಧುನಿಕ ಸೃಜನಶೀಲ ಸಾಹಿತ್ಯಗಳಾದ ಸಣ್ಣಕತೆ-ಕಾದಂಬರಿಗಳು ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟು ಪಡೆದರೂ ನಂತರ ತೊಂಬತ್ತರ ದಶಕದವರೆಗೆ ಅದು ನಿಂತ ನೀರಾಗಿತ್ತು. ಆದರೆ ತುಳು ರಂಗಭೂಮಿ ಸದಾ ಕ್ರಿಯಾಶೀಲವಾಗಿತ್ತು. ಹಲವು ನಾಟಕಕಾರರು, ಕಲಾವಿದರು ಗುರುತಿಸಿಕೊಳ್ಳತೊಡಗಿದರು. ತುಳು ನಾಟಕದ ಜನಪ್ರಿಯತೆ ತುಳು ಚಲನಚಿತ್ರಗಳನ್ನು ನಿರ್ಮಿಸಲೂ ಕಾರಣವಾಯಿತು.

ತುಳು ಜನಪದೀಯ ಕಥೆಯೊಂದನ್ನಾಧರಿಸಿ ರಚನೆಯಾಗಿ ರಂಗಪ್ರಯೋಗ ಕಂಡ ಮೊದಲ ಚಾರಿತ್ರಿಕ ನಾಟಕ 'ಕೋಟಿ ಚೆನ್ನಯ'. ಹಾಗೆಯೇ ವಿಶುಕುಮಾರರ ನಿರ್ದೇಶನದಲ್ಲಿ 'ಕೋಟಿ ಚೆನ್ನಯ' ಸಿನೆಮಾ 1973ರಲ್ಲಿ ಬಿಡುಗಡೆಗೊಂಡಿತು. ಯಕ್ಷಗಾನದಲ್ಲಿ ಅದಾಗಲೇ ದೊಡ್ಡ ಮಟ್ಟದ ಕಲಾಪ್ರೇಮಿಗಳನ್ನು ಸೃಷ್ಟಿಸಿದ್ದ ಈ ಕಥೆಯು ನಾಟಕ ರಂಗ ಮತ್ತು ಚಿತ್ರರಂಗಗಳೆರಡರಲ್ಲೂ ಜಯಭೇರಿ ಕಂಡಿತು. ಜೊತೆಗೆ ಹತ್ತು ವರ್ಷಗಳ ನಂತರ ಸೀತಾನದಿ ಗಣಪಯ್ಯ ಶೆಟ್ಟಿ ಅವರಿಂದ ಇದೇ ಕಥೆ ಮತ್ತೆ ನಾಟಕ ರೂಪ ಪಡೆಯಿತು. ಇವು ಮೂರನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಜನಪದ ಸಿದ್ಧ ಕತೆಯೊಂದು ಇದ್ದರೂ ಸೃಜನಶೀಲ ಸಾಹಿತ್ಯಕ್ಕೆ ತರುವಾಗ ಅದರಲ್ಲಿನ ಒಳನೋಟಗಳು ಭಿನ್ನತೆಯನ್ನು ಪಡೆದುಕೊಳ್ಳುತ್ತವೆ. ಬರಹಗಾರನ ಬದುಕು, ಆ ಕಾಲಘಟ್ಟದ ರಾಜಕೀಯ-ಸಾಮಾಜಿಕ ಸಂಗತಿಗಳು, ಪ್ರಾದೇಶಿಕ ಅನನ್ಯತೆಗಳು ಬರಹದ ಮೇಲೆ ಬರಹಗಾರನಿಗೆ ಅರಿವಿಲ್ಲದೆಯೂ ಪ್ರಭಾವ ಬೀರಿರುತ್ತವೆ. 'ಕೋಟಿ ಚೆನ್ನಯ' ಕಥೆಯು ತುಳುನಾಡಿನಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿರುವ ಬಿಲ್ಲವ ಸಮುದಾಯದ ಅಸ್ಮಿತೆಯ ಸಂಕೇತವಾಗಿ ಮೂಡಿ ಬಂದಿರುವಂತೆಯೇ ಹಿಂದಿನ ತುಳುನಾಡಿನಲ್ಲಿ ಆ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು ಬರಹಗಾರನ ಕಾಲಕ್ಕೆ-ಸಮಾಜಕ್ಕೆ ಪೂರಕವಾಗಿ ಅಭಿವ್ಯಕ್ತಗೊಳ್ಳುತ್ತಾ ಹೋಗುತ್ತವೆ. ಇದನ್ನು ಈ ಲೇಖನದಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದ್ದೇನೆ.

**KEYWORDS:** ಜಮೀನ್ದಾರಿ, ಗೇಣಿ, ಬಲ್ಲಾಳ, ದೇಯಿ, ಸಮುದಾಯ.

---

* **ಪ್ರಶಾಂತಿ ಬಿ.,** ಸಂಶೋಧನಾರ್ಥಿ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ, ಮಂಗಳೂರು.

**ಪ್ರಸ್ತಾವನೆ:**

ತುಳು ರಂಗಭೂಮಿಗೆ ನೂರಾರು ವರ್ಷಗಳ ಇತಿಹಾಸವೇನೂ ಕಂಡುಬರುವುದಿಲ್ಲ. ಹೆಚ್ಚೆಂದರೆ ನೂರು–ನೂರ ಹದಿನೈದು ವರ್ಷಗಳಿಂದ ತುಳು ರಂಗಭೂಮಿ ಬೆಳೆದು ಬಂದಿದೆ. ತುಳುನಾಡಿನ ಮಂಗಳೂರು, ಉಡುಪಿ, ಮೂಲ್ಕಿ ಮೊದಲಾದ ಕಿರು ಪೇಟೆಗಳಲ್ಲಿ ತುಳು ರಂಗಭೂಮಿ ಚಟುವಟಿಕೆಗಳು ಹುಟ್ಟಿಕೊಂಡವು. ಆಧುನಿಕ ಇಂಗ್ಲಿಷ್ ಶಿಕ್ಷಣ, ಮಿಶನರಿಗಳ ತುಳು ಚಟುವಟಿಕೆಗಳು ಮತ್ತು ಕನ್ನಡ ಸಾಹಿತ್ಯ ಚಟುವಟಿಕೆಗಳಲ್ಲಿ ತುಳುನಾಡಿನವರು ಮುಖ್ಯ ಪಾತ್ರ ವಹಿಸಿದುದು ತುಳು ಸೃಜನಶೀಲ ಸಾಹಿತ್ಯಗಳು ಮೂಡಿಬರಲು ಪ್ರೇರಣೆಯಾಗಿದ್ದವು. ದೇಶಾಭಿಮಾನ, ಭಾಷಾಭಿಮಾನ, ಸ್ವಾಭಿಮಾನದ ಕುರುಹಾಗಿ, ಅಸ್ಮಿತೆಯಾಗಿ ಇವುಗಳು ಮೂಡಿಬಂದವು. ಇದರ ಭಾಗವಾಗಿ ಶಾಲಾ–ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳಲ್ಲಿ ರಂಗ ಪ್ರಯೋಗಗಳು ನಡೆಯುತ್ತಾ ಬಂದವು. ರಾಜ–ರಾಜಧಾನಿ ಪರಿಕಲ್ಪನೆಗಳಿಲ್ಲದ, ಮಿಶನರಿಗಳ ಸಾಹಿತ್ಯದಿಂದ ಆಧುನಿಕ ಸಾಹಿತ್ಯದ ಜ್ಞಾನ ಗಿಟ್ಟಿಸಿಕೊಂಡಿದ್ದ ಮತ್ತು ಪೋರ್ಚುಗೀಸರು–ಬ್ರಿಟಿಷರ ವಸಾಹತುವಿಗೆ ಕರ್ನಾಟಕದ ಇತರ ಭಾಗಗಳಿಗಿಂತ ಮೊದಲು ತಮ್ಮನ್ನು ಒಡ್ಡಿಕೊಂಡಿದ್ದ ಕರಾವಳಿಗರಿಗೆ ಕನ್ನಡ ಮತ್ತು ತುಳುವಿನ ಸಾಹಿತ್ಯ ಕೃಷಿಗೆ ಸಾಮಾಜಿಕ ಸಂಗತಿಗಳೇ ವಸ್ತುಗಳಾದವು. ಪುರಾಣ ಕಥಾನಕಗಳ ಪ್ರಭಾವ ಅಷ್ಟಾಗಿ ಕಂಡುಬರದೆ, ತುಳು ಧಾರ್ಮಿಕ ರಂಗಭೂಮಿ ಪರಂಪರೆಯು ದಟ್ಟವಾಗಿ ಪ್ರಭಾವ ಬೀರಿರುವುದು ಕಂಡುಬರುತ್ತದೆ.

ಕ್ರಿ.ಶ. 1933ರಲ್ಲಿ ಪ್ರದರ್ಶನಗೊಂಡ ಮಾಧವ ತಿಂಗಳಾಯರ 'ಜನಮರ್ಲ್' ತುಳುವಿನ ಪ್ರಪ್ರಥಮ ಮುದ್ರಿತ ನಾಟಕ. ಆದರೆ ಸಣ್ಣ ಪ್ರಹಸನಗಳಂತಹ ರಂಗಭೂಮಿ ಪ್ರಯೋಗಗಳು ಆ ಹಿಂದೆಯೂ ನಡೆಯುತ್ತಾ ಬಂದಿರಬಹುದು ಎಂದು ವಿದ್ವಾಂಸರು ಊಹಿಸುತ್ತಾರೆ. ತುಳುವಿನ ಮೊದಲ ನಾಟಕಗಳು ಉಪದೇಶದ ಧಾಟಿಯಲ್ಲಿವೆ ಎಂದು ಬಿ.ಆರ್. ನಾಗೇಶ್ ಹೇಳಿದ್ದಾರೆ. ರಾಷ್ಟ್ರೀಯತೆಯ ಗ್ರಹಿಕೆ ಮತ್ತು ಗಾಂಧಿ ಪ್ರಭಾವಗಳಿಂದ ಸಮುದಾಯದ ಅಂತರ್ಯವು ಶುದ್ಧಿಯಾಗದೆ ಬಹಿರಂಗದ ಸ್ವಾತಂತ್ರ್ಯ ಹೋರಾಟ ಬಲಿಷ್ಠವಾಗದು ಎಂಬ ಗ್ರಹಿಕೆಯಿಂದ ಮೂಡಿಬಂದಿರುವಂತವು.

ತುಳು ಭಾಷೆಯನ್ನು ಮೊದಲು ರಂಗಕ್ಕೆ ತಂದ ಕೀರ್ತಿ ಪಂಜೆ ಮಂಗೇಶರಾಯರಿಗೆ ಸಲ್ಲುತ್ತದೆ. ಅವರು 'ವಿದ್ಯೆದ ತಾದಿ' ನಾಟಕಕ್ಕೆ ಶಾಲಾ ವಾರ್ಷಿಕೋತ್ಸವ ಸಂದರ್ಭ ಪ್ರದರ್ಶನಕ್ಕೆ ಅವಕಾಶ ನೀಡುವ ಮೂಲಕ ತುಳು ರಂಗಭೂಮಿಗೆ ಮುನ್ನುಡಿ ಬರೆದರು.

**ಅಧ್ಯಯನದ ಉದ್ದೇಶ–ವ್ಯಾಪ್ತಿ:**

ಆಧುನಿಕ ಸೃಜನಶೀಲ ಸಾಹಿತ್ಯಗಳಾದ ಸಣ್ಣಕತೆ–ಕಾದಂಬರಿಗಳು ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟು ಪಡೆದರೂ ನಂತರ ತೊಂಬತ್ತರ ದಶಕದವರೆಗೆ ಅದು ನಿಂತ ನೀರಾಗಿತ್ತು. ಆದರೆ ತುಳು ರಂಗಭೂಮಿ ಸದಾ ಕ್ರಿಯಾಶೀಲವಾಗಿತ್ತು. ಹಲವು ನಾಟಕಕಾರರು, ಕಲಾವಿದರು ಗುರುತಿಸಿಕೊಳ್ಳತೊಡಗಿದರು. ತುಳು ನಾಟಕದ ಜನಪ್ರಿಯತೆ ತುಳು ಚಲನಚಿತ್ರಗಳನ್ನು ನಿರ್ಮಿಸಲೂ ಕಾರಣವಾಯಿತು.

ತುಳು ಜನಪದೀಯ ಕಥೆಯೊಂದನ್ನಾಧರಿಸಿ ರಚನೆಯಾಗಿ ರಂಗಪ್ರಯೋಗ ಕಂಡ ಮೊದಲ ಚಾರಿತ್ರಿಕ ನಾಟಕ 'ಕೋಟಿ ಚೆನ್ನಯ'. ಸಾಹಿತಿ ವಿಶುಕುಮಾರ್ ಬರೆದ ಈ ನಾಟಕ 1967ರಲ್ಲಿ ಪ್ರಕಟವಾಯಿತು. ತುಳು ಮಣ್ಣಿನದ್ದೇ ಆದ ಅನನ್ಯ ಕಥಾ ವಸ್ತುವನ್ನು ಮೊದಲ ಬಾರಿಗೆ ನಾಟಕಕ್ಕೆ ಬಳಸಿದ ಹೆಗ್ಗಳಿಕೆ ವಿಶುಕುಮಾರರದ್ದು. ಪಂಜೆ ಮಂಗೇಶರಾಯರು ಕನ್ನಡದಲ್ಲಿ 'ಕೋಟಿ ಚೆನ್ನಯ' ಕಾದಂಬರಿಯನ್ನು ಬರೆಯುವ ಮೂಲಕ ಪಾಡ್ದನ ಕತೆಯನ್ನು

ಆಧುನಿಕ ಸೃಜನಶೀಲ ಸಾಹಿತ್ಯಕ್ಕೆ ಮೊದಲ ಬಾರಿಗೆ ತಂದವರು. ಯಕ್ಷಗಾನದಲ್ಲೂ 'ಕೋಟಿ ಚೆನ್ನಯ'ರ ಕತೆ ಅದಾಗಲೇ ಬಂದಾಗಿತ್ತು. ವಿಶುಕುಮಾರರ ನಾಟಕ ಸಾಹಿತ್ಯದ ಮೇಲೆ ಪಂಜೆಯವರ ಪ್ರಭಾವ ಆಗಿರುವುದು ಕಂಡುಬರುತ್ತದೆ. ಕಥೆಯ ನಡೆ, ಘಟನೆಗಳ ಅಭಿವ್ಯಕ್ತಿ, ನಿರೂಪಣಾ ಶೈಲಿ, ಕಥಾ ಪಾತ್ರಗಳ ಚಿತ್ರಣ ಇವೆಲ್ಲವುಗಳಲ್ಲಿ ಇದನ್ನು ಕಾಣಬಹುದಾಗಿದೆ.

ಆ ಬಳಿಕ ಸೀತಾನದಿ ಗಣಪಯ್ಯ ಶೆಟ್ಟಿ 'ಕೋಟಿ ಚೆನ್ನಯ' ನಾಟಕ ಬರೆದರು. 'ಕೋಟಿ ಚೆನ್ನಯ' ಸಿನೆಮಾದಲ್ಲಿ ಅಭಿನಯಿಸಿದ ಕೋಟಿ ಚೆನ್ನಯರ ಫೋಟೋ ಆ ಪುಸ್ತಕದಲ್ಲಿ ಹಾಕಲಾಗಿದೆ. ಈ ನಾಟಕದ ಪ್ರಸ್ತುತಿಯು ವಿಶುಕುಮಾರ್ ಅವರ ನಾಟಕ-ಸಿನೆಮಾಗಿಂತ ಹಲವು ವಿಚಾರಗಳಲ್ಲಿ ಭಿನ್ನವಾಗಿದೆ. ಹಾಗೆಯೇ ಶಿವರಾಮ ಶಿಶಿಲ ಅವರು 'ಕೋಟಿ ಚೆನ್ನಯ ಕನ್ನಡ ಮಕ್ಕಳ ನಾಟಕ'ವನ್ನು ಬರೆದಿದ್ದಾರೆ. 1987ರಲ್ಲಿ ಇದು ಪ್ರಕಟವಾಗಿದೆ. 'ಬಿರ್ದ್ ದ ಬೀರೆರ್ ಕೋಟಿ ಚೆನ್ನಯೆರ್' ತುಳು ಚಾರಿತ್ರಿಕ ನಾಟಕವನ್ನು ಕದ್ರಿ ನವನೀತ್ ಶೆಟ್ಟಿ ಅವರು 2014ರಲ್ಲಿ ಪ್ರಕಟಿಸಿದ್ದಾರೆ. ಹೀಗೆ ಕೋಟಿ ಚೆನ್ನಯ ಕಥೆಯನ್ನು ಆಧರಿಸಿ ತುಳುವಿನಲ್ಲಿ ಸುಮಾರು 5 ನಾಟಕಗಳು ರಚನೆಯಾಗಿದ್ದು, ಈ ನಾಟಕಗಳು ಎಷ್ಟೋ ರಂಗಪ್ರಯೋಗಗಳನ್ನು ಕಂಡಿರುವುದು ತುಳು ರಂಗಭೂಮಿ ಕಲಾಭಿಮಾನಿಗಳ ಮನೋಭೂಮಿಕೆಗೆ ಹಿಡಿದ ಕೈಗನ್ನಡಿಯಾಗಿದೆ.

'ಸದಾ ಕ್ರಿಯಾಶೀಲವಾಗಿರುವ ತುಳು ರಂಗಭೂಮಿಗೆ ಶ್ರೀಮಂತರು ಮತ್ತು ಜನಸಾಮಾನ್ಯರು ಹೀಗೆ ಎಲ್ಲಾ ವರ್ಗದ ಕಲಾಭಿಮಾನಿಗಳ ಬೆಂಬಲ ದೊರಕುತ್ತಾ ಬಂದಿದೆ. ಇದು ತುಳು ರಂಗಭೂಮಿಯ ಅನನ್ಯತೆ' ಎನ್ನುತ್ತಾರೆ ತುಳು ಹಾಸ್ಯ ನಾಟಕ ಬರಹಗಾರ ವಿಜಯಕುಮಾರ್ ಕೊಡಿಯಾಲ್‌ಬೈಲ್. ಈ ನಿಟ್ಟಿನಲ್ಲಿ ಸುಮಾರು 60-70 ವರ್ಷಗಳ ಹಿಂದೆ ನಾಟಕ ರಂಗ ಮತ್ತು ಸಿನೆಮಾ ರಂಗದಲ್ಲಿ ಜನಪದ ಕಥೆಯೊಂದು ಸೃಷ್ಟಿಸಿದ ಅಲೆಯನ್ನು ಮತ್ತು ಈ ಕತೆಯ ಬರಹಗಾರರ ಮೇಲೆ ಬೀರಿದ ರಾಜಕೀಯ-ಸಾಮಾಜಿಕ-ಧಾರ್ಮಿಕ ಅಂಶಗಳಲ್ಲಿನ ವೈವಿಧ್ಯತೆಯನ್ನು ಚರ್ಚಿಸುವುದು ಬರಹದ ಉದ್ದೇಶವಾಗಿದೆ. ವೈಚಾರಿಕ ದೃಷ್ಟಿಕೋನವನ್ನು ಇರಿಸಿಕೊಂಡು ನೋಡುವ ಪ್ರಯತ್ನ ಮಾಡಲಾಗಿದೆ. 20ನೇ ಶತಮಾನದಲ್ಲಿ ರಚಿತವಾದ ವಿಶುಕುಮಾರರ ನಾಟಕ ಮತ್ತು ಸಿನೆಮಾ ಹಾಗೂ ಸೀತಾನದಿ ಗಣಪಯ್ಯ ಶೆಟ್ಟರ ನಾಟಕವನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ವಿಶುಕುಮಾರರ ನಾಟಕ-ಸಿನೆಮಾ:**

ಜನಪದ ಆಧಾರಿತ ಧಾರ್ಮಿಕ ಕಥಾನಕಗಳನ್ನು ರಂಗಪ್ರಯೋಗಕ್ಕೆ ತಂದಾಗ ತುಳು ರಂಗಭೂಮಿ ಸೋಲುವುದಿಲ್ಲ ಅನ್ನುವುದು 20ನೇ ಶತಮಾನದ 60-70ರ ದಶಕದ 'ಕೋಟಿ ಚೆನ್ನಯ'ದಿಂದ ತೊಡಗಿ ಒಂದೆರಡು ವರ್ಷಗಳ ಹಿಂದೆ ರಂಗಕ್ಕೆ ಬಂದ 'ಶಿವದೂತ ಗುಳಿಗ' ನಾಟಕದವರೆಗೆ ಸಾಬೀತಾಗಿದೆ. ಅದಕ್ಕೆ ಮುನ್ನುಡಿ ಬರೆದವರು ವಿಶುಕುಮಾರ್. ವಿಶುಕುಮಾರರ ನಾಟಕ 1967ರಲ್ಲಿ ಪ್ರಕಟವಾದರೂ 1963ರಲ್ಲಿ ಮುಂಬಯಿಯಲ್ಲಿ ಪ್ರದರ್ಶನಗೊಂಡ ಬಗ್ಗೆ ಅವರು ಪುಸ್ತಕದ ಮುನ್ನುಡಿಯಲ್ಲಿ ಉಲ್ಲೇಖಿಸಿದ್ದಾರೆ. ಯಶಸ್ಸು ಕಂಡ ಮೇಲೆ ತುಳು ನಾಟಕಗಳು ಪ್ರಕಟಗೊಂಡಿರುವುದು ಹೆಚ್ಚು. ರಂಗ ವಿನ್ಯಾಸದ ವೈವಿಧ್ಯತೆ ಇಲ್ಲದ ಆ ಕಾಲದಲ್ಲಿ 'ಕೋಟಿ ಚೆನ್ನಯ'ವನ್ನು ಗೆಲ್ಲಿಸಿರುವುದು ಅದರ ಗಟ್ಟಿ ಕತೆ. ಯಕ್ಷಗಾನದ ಪ್ರಭಾವದಿಂದ ತುಳು ಕಲಾಭಿಮಾನಿಗಳಲ್ಲಿ ಮೂಡಿದ್ದ ಭಕ್ತಿ ಮತ್ತು ಶೇಕ್ಸ್‌ಪಿಯರ್ ಇಂಗ್ಲಿಷ್ ನಾಟಕಗಳ ಅನುವಾದದಿಂದ ಕನ್ನಡ ರಂಗಭೂಮಿಯಲ್ಲಿ ಕಂಡ ದುರಂತ ನಾಟಕಗಳ ಅಲೆ ಕಲಾಪ್ರಿಯರು ಈ ನಾಟಕವನ್ನು ಸ್ವೀಕರಿಸಲು ಕಾರಣ. ಬಹುತೇಕ ಎಲ್ಲಾ ಕೋಟಿ ಚೆನ್ನಯ ನಾಟಕಗಳೂ

ಅವರ ಸಾವಿನೊಂದಿಗೆ ದುಃಖಾಂತ್ಯಗೊಳ್ಳುತ್ತವೆ. ಈ ದೃಷ್ಟಿ ಮತ್ತು ಯಕ್ಷಗಾನದ ಯಶಸ್ಸು ವಿಶುಕುಮಾರರನ್ನು ನಾಟಕ ಮಾಡಲು ಪ್ರೇರೇಪಿಸಿರುವಂತೆ, ಅದನ್ನು ಸಿನೆಮಾವಾಗಿಸಲೂ ಪ್ರೇರಣೆ ನೀಡಿತು. 1971ರಲ್ಲಿ 'ಎನ್ನ ತಂಗಡಿ' ಮೊದಲ ತುಳು ಸಿನೆಮಾ ಮೂಡಿಬಂದರೆ, ಮುಂದಿನ ಎರಡೇ ವರ್ಷಗಳಲ್ಲಿ 'ಕೋಟಿ ಚೆನ್ನಯ' ಸಿನೆಮಾವನ್ನು ಅವರು ತೆರೆಗೆ ತಂದರು. 1973ರ ಜೂನ್ 15ರಂದು ಮಂಗಳೂರಿನ ಜ್ಯೋತಿ ಚಿತ್ರಮಂದಿರದಲ್ಲಿ ಬಿಡುಗಡೆಯಾಗಿ 125 ದಿನಗಳ ಯಶಸ್ವಿ ಪ್ರದರ್ಶನ ಕಂಡು ದಾಖಲೆ ನಿರ್ಮಿಸಿತು. ಮುಂದೆ ಸುಮಾರು ವರ್ಷಗಳವರೆಗೆ ಈ ದಾಖಲೆಯನ್ನು ಮುರಿಯಲು ಯಾವ ತುಳು ಚಿತ್ರಕ್ಕೂ ಸಾಧ್ಯವಾಗಲಿಲ್ಲ. ಕಲೆಯ ಬಗ್ಗೆ ಗಂಧ ಗಾಳಿಯಿಲ್ಲದ ಸಾಮಾನ್ಯ ತುಳುವನೂ ಕೋಟಿ ಚೆನ್ನಯರ ಬಗೆಗಿನ ಧಾರ್ಮಿಕ ಭಾವನೆಯಿಂದ ಈ ಚಿತ್ರವನ್ನು ವೀಕ್ಷಿಸಿದ ಉದಾಹರಣೆಗಳಿವೆ. ಈ ಚಿತ್ರವು ರಾಜ್ಯ ಸರಕಾರದಿಂದ ಆ ವರ್ಷದ ನಾಲ್ಕನೇ 'ಅತ್ಯುತ್ತಮ ಚಿತ್ರ' ಪ್ರಶಸ್ತಿ ಪಡೆದುಕೊಂಡಿತು.

ವಿಶು ಕುಮಾರರ ನಿರ್ದೇಶನದಲ್ಲಿ ಮುದ್ದು ಸುವರ್ಣ ಅವರ ನಿರ್ಮಾಣದ 'ಪ್ರಜಾಫಿಲಂಸ್' ಬ್ಯಾನರ್‌ನಡಿಯಲ್ಲಿ 'ಕೋಟಿ ಚೆನ್ನಯ' ಚಿತ್ರ ಬಿಡುಗಡೆಯಾಯಿತು. ಕನ್ನಡ ಮತ್ತಿತರ ಸಿನೆಮಾಗಳಂತೆಯೇ ಈ ಚಿತ್ರವನ್ನು ಅದ್ದೂರಿಯಾಗಿಯೇ ಚಿತ್ರೀಕರಿಸಲಾಗಿತ್ತು. ಈ ಚಿತ್ರಗಳ ಹಾಡುಗಳನ್ನು ಆಗ ಕನ್ನಡ ಚಿತ್ರರಂಗದಲ್ಲಿ ಮೇರು ಗಾಯಕರಾಗಿದ್ದ ಪಿ.ಬಿ. ಶ್ರೀನಿವಾಸ್ ಮತ್ತು ಎಸ್. ಜಾನಕಿ ಅವರಲ್ಲಿ ಹಾಡಿಸಿದ್ದರು. ಈ ಚಿತ್ರದ ಪಾತ್ರಗಳಿಗೆ ಕಲಾವಿದರನ್ನು ಆಯ್ಕೆ ಮಾಡುವಾಗಲೂ ವಿಶು ಕುಮಾರ್ ಅವರು ಯಾವುದೇ ರಾಜಿಗೆ ತಯಾರಿರಲಿಲ್ಲವಂತೆ. ಆಗಿನ ಬಹುಬೇಡಿಕೆಯ ನಾಯಕಿ ಕಲ್ಪನಾ ಅವರನ್ನು ದೇಯಿ ಪಾತ್ರಕ್ಕಾಗಿ ಕರೆ ತಂದಿದ್ದರು. ಅವಳಿ ಸಹೋದರರಿಗೆ ಹೋಲಿಕೆ ಇರುವ ಸುಭಾಶ್ ಪಡಿವಾಳ ಮತ್ತು ವಾಮನ್ ರಾಜ್ ಅವರನ್ನು ಕೋಟಿ ಚೆನ್ನಯ ಪಾತ್ರಗಳಿಗಾಗಿ ಹುಡುಕಿ ತಂದಿದ್ದರು. ಮೂಲತಃ ಅವರಿಬ್ಬರೂ ಸಹೋದರರಲ್ಲ, ಇವರ ಕೋಟಿ ಚೆನ್ನಯ ಪಾತ್ರಗಳು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದೆ. ಉಳಿದಂತೆ ಚೆನ್ನಪ್ಪ ಸುವರ್ಣ, ಫೈಟರ್ ಶೆಟ್ಟಿ, ಲೋಕಯ್ಯ ಶೆಟ್ಟಿ, ಆನಂದ ಗಾಣಿಗ, ಮಂಜುನಾಥ ಶಾಲಿವಾಹನ, ಕುದ್ಕಾಡಿ ವಿಶ್ವನಾಥ ರೈ, ಬಿ.ಟಿ.ಎನ್. ಕುಲಾಲ್ ಮೊದಲಾದ ಸ್ಥಳೀಯರು ತಾರಾಗಣದಲ್ಲಿದ್ದರು.

ಕಲ್ಪನಾ ಅವರ ಕಾಲ್‌ಶೀಟ್‌ಗಾಗಿ ಕನ್ನಡ ಚಿತ್ರರಂಗದ ನಿರ್ಮಾಪಕರು ಕ್ಯೂ ನಿಲ್ಲುತ್ತಿದ್ದ ದಿನಗಳವು. ಅವರನ್ನೇ ತನ್ನ ಸಿನೆಮಾಕ್ಕಾಗಿ ಕರೆತಂದ ವಿಶುಕುಮಾರರು, ಅವರಿಗೂ ಪಾತ್ರವನ್ನು ಹೀಗೆಯೇ ಆಗಬೇಕೆಂದು ನಿರ್ದೇಶನ ನೀಡುತ್ತಿದ್ದರಂತೆ. ಇದರಿಂದ ಕಿರಿಕಿರಿಗೊಂಡ ನಟಿ ಕಲ್ಪನಾ ಒಂದು ಹಂತದಲ್ಲಿ ಚಿತ್ರವನ್ನೇ ತೊರೆದು ನಡೆದಿದ್ದರಂತೆ. ಬಳಿಕ ಚಿತ್ರದ ಬಗೆಗಿನ ವಿಶುಕುಮಾರರ ಕಾಳಜಿ ಮನದಟ್ಟಾಗಿ ವಾಪಸ್ ಬಂದು ಚಿತ್ರೀಕರಣ ಪೂರೈಸಿದ್ದರಂತೆ. ಆದರೆ ಈ ವಾದ-ವಿವಾದದಿಂದಾಗಿ ಹಲವು ದಿನಗಳ ಚಿತ್ರೀಕರಣ ಮೊಟಕಾಗಿ ನಷ್ಟ ಉಂಟಾಗಿತ್ತು. ಆದರೂ ಚಿತ್ರ ತೆರೆಗೆ ಬಂದಾಗ ಈ ಎಲ್ಲಾ ಕಷ್ಟಗಳನ್ನು ಮರೆಯುವ ಹಾಗೆ ಚಿತ್ರ ಪ್ರೇಮಿಗಳು ಹರಸಿದ್ದರು. ಭರ್ಜರಿ ಯಶಸ್ಸು ಪಡೆದು, ತುಳು ಚಿತ್ರ ರಂಗದಲ್ಲಿಯೇ ದಾಖಲೆಯನ್ನು ನಿರ್ಮಿಸಿತ್ತು.

ಒಂದು ವೈಚಾರಿಕ ಆಧುನಿಕ ಮನಸ್ಸು ತುಳು ರಂಗಭೂಮಿಗೆ 'ತುಳುತನ'ವನ್ನು ತರಬೇಕೆಂದು ಮಾಡಿದ ಪ್ರಯೋಗಶೀಲತೆಯಾಗಿ 'ಕೋಟಿ ಚೆನ್ನಯ' ಬಂದಿದೆ. ಜಾನಪದ ಮತ್ತು ಇತಿಹಾಸಗಳನ್ನು ತುಳು ನಾಟಕ ರಂಗಕ್ಕೆ ಸೇರಿಸಿದ ಪ್ರಯತ್ನವಾಗಿಯೂ 'ಕೋಟಿ ಚೆನ್ನಯ'ವನ್ನು ಕಾಣಬಹುದು. ತುಳು ನಾಟಕಗಳು ಕನ್ನಡ, ಹಿಂದಿ, ತಮಿಳು ಚಲನಚಿತ್ರಗಳಿಂದ ರಂಗ ರಚನೆಗಳನ್ನು ಪಡೆದುಕೊಂಡವು. ಮುಂದೆ ಈ ತುಳು ರಂಗಭೂಮಿಕೆಯೆ ತುಳು

ಸಿನೆಮಾ ಕ್ಷೇತ್ರದ ಹುಟ್ಟಿಗೆ ಕಾರಣವಾಯಿತು.

**ತುಳುನಾಡಿನ ಜನಜೀವನ:**

ಅರಸೊತ್ತಿಗೆಯಲ್ಲಿ ರಾಜನ ಜೀವಕ್ಕೆ ಪ್ರಾಮುಖ್ಯತೆ ಇರುತ್ತದೆಯೇ ಹೊರತು ಪ್ರಜೆಗಳು ಆಜ್ಞಾಪಾಲಕರು ಅಷ್ಟೇ. ಕೋಟಿಚೆನ್ನಯ ಕತೆಯಲ್ಲಿ ಬರುವ ಬಲ್ಲಾಳ ಜಮೀನ್ದಾರ. ತುಳುನಾಡಿನಲ್ಲಿ ಜಮೀನ್ದಾರರು ಅರಸನ ಮರ್ಜಿನಲ್ಲಿ ಬದುಕಿದವರು. ಅವನ ಜೀವಕ್ಕೆ ಕುಂದು ಬಂದಾಗ ತುಂಬು ಗರ್ಭಿಣಿ ದೇಯಿಯ ಆರೋಗ್ಯ ನಗಣ್ಯವೆನಿಸುತ್ತದೆ. ಇಲ್ಲಿ ದೇಯಿಯೂ ಆಜ್ಞಾಪಾಲಕಳೆನಿಸಿಕೊಳ್ಳುತ್ತಾಳೆ. ಗುಣ ಮಾಡಿದುದಕ್ಕೆ ಪ್ರತಿಯಾಗಿ ಅವಳು ಉಡುಗೊರೆ ಬಯಸುವುದು ತುಳುನಾಡಿನಲ್ಲಿ ಜಮೀನ್ದಾರಿಕೆಯ ಕಾಲಘಟ್ಟದಲ್ಲಿ ಕೃಷಿ ಕಾರ್ಮಿಕರ ಜೀವನದ ಚಿತ್ರಣವನ್ನು ನೀಡುತ್ತದೆ. ಬಲ್ಲಾಳನಿಗೆ ವಿಧೇಯಳಾಗಿ ನಡೆದುಕೊಂಡರೂ ಉಡುಗೊರೆ ಕೊಡಬೇಕಾದರೆ ಮಂತ್ರಿ ಬುದ್ಯಂತನಲ್ಲಿ ಕೇಳಬೇಕೆಂದು ಬಲ್ಲಾಳ ಹೇಳಿದಾಗ ಅವಳ ಉತ್ತರ ಸಾಮಾನ್ಯ ಸ್ತ್ರೀಯೊಬ್ಬಳ ಸ್ವಾಭಿಮಾನವನ್ನು ಸೂಚಿಸುತ್ತದೆ.

ತುಳುನಾಡಿನಲ್ಲಿ ಬಿಲ್ಲವ ಸಮುದಾಯದವರು ಜಾತಿ ಶೋಷಣೆಗೆ ಗುರಿಯಾದವರು ಎನ್ನುವುದನ್ನು ಈ ಕತೆ ವ್ಯಕ್ತಪಡಿಸುತ್ತದೆ. ದೇಯಿ ಬಲ್ಲಾಳನಿಗೆ ಮದ್ದು ಕೊಡಲು ಚಾವಡಿಗೆ ಪ್ರವೇಶಿಸಲು ಅಂಜುವುದು–ಬದಲಾಗಿ ದೈವಕ್ಕೆ ಹರಕೆ ಹೇಳುವುದು, ಬಲ್ಲಾಳನಿಂದ ತಿರಸ್ಕೃತರಾಗಿ ಬೂಡಿನಿಂದ ಹೊರಬಂದ ಕೋಟಿ ಚೆನ್ನಯರು ಬಾಯಾರಿಕೆ ನೀಗಿಸಲು ಹೋದಾಗ ಬ್ರಾಹ್ಮಣನೊಬ್ಬ ಅಡಿಕೆ ಹಾಳೆಯಲ್ಲಿ ನೀರು ಕೊಡಲು ಮುಂದಾಗುವುದು ಆ ಸಮುದಾಯದ ಸಾಮಾಜಿಕ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಚೆನ್ನಯ ಪಯ್ಯ ಬೈದ್ಯನನ್ನು 'ಪೂಜಾರಿ..' ಎಂದು ಸಂಬೋಧಿಸಿದಾಗ ಅವನು ವಿರೋಧಿಸುವುದು ಜಾತಿ ಕೀಳರಿಮೆಯ ದ್ಯೋತಕವಾಗಿ.

ವಿಶು ಕುಮಾರರು ನಾಟಕ ಮತ್ತು ಸಿನೆಮಾ ಎರಡರಲ್ಲೂ ದೇಯಿಯ ಪಾತ್ರವನ್ನಾಗಲೀ, ಕೋಟಿ ಚೆನ್ನಯರ ಪಾತ್ರಗಳನ್ನಾಗಲೀ ಲೌಕಿಕ ವ್ಯಕ್ತಿಗಳಾಗಿ ಅಭಿವ್ಯಕ್ತಪಡಿಸಿದ್ದಾರೆಯೇ ಹೊರತು ಅತಿಮಾನುಷ ಶಕ್ತಿಯಾಗಿ ಪ್ರತಿಬಿಂಬಿಸಿಲ್ಲ.

ಪಂಜದ ಸೈನಿಕರಿಂದ ತಪ್ಪಿಕೊಳ್ಳಲು ಪೈಯ್ಯ ಬೈದ್ಯ ಮತ್ತು ಕಿನ್ನಿದಾರು ಆಟಿಕೊಡಂಜ ವೇಷ ಧರಿಸಿ ಬರುತ್ತಾರೆ. ಪೈಯ್ಯ ಬೈದ್ಯ ಪಂಜದ ಬಂಟನಾಗಿದ್ದವನು ಎನ್ನುವ ಅಂಶ ಇದರಿಂದ ತಿಳಿದು ಬರುತ್ತದೆ. ಅಧ್ಯಯನಕಾರರ ಪ್ರಕಾರ ಹಿಂದೆ ಬಿಲ್ಲವ ಸಮುದಾಯಕ್ಕೆ ಭೂಮಿಯ ಒಡೆತನ ಮತ್ತು ಆಡಳಿತಾತ್ಮಕವಾಗಿ ಅವಕಾಶಗಳು ಇರಲಿಲ್ಲ. ಜೊತೆಗೆ ಮೂರ್ತೆ ಮಾಡುವವರು ಮೇಲ್ವರ್ಗದವರಿಂದ ದೂರ ಇರಿಸಲ್ಪಟ್ಟವರು ಈ ಮೂರು ಕಾರಣಕ್ಕಾಗಿ ಕೋಟಿ ಚೆನ್ನಯರು ತುಳಿತಕ್ಕೊಳಗಾದ ಸಮುದಾಯದ ಪ್ರತಿನಿಧಿಯಾಗಿ ಹೋರಾಡುತ್ತಾರೆ ಎಂಬ ತಾರ್ಕಿಕತೆಗೆ ವೈರುಧ್ಯವಾಗಿ ಈ ಸನ್ನಿವೇಶ ಬರುತ್ತದೆ.

ವಿಶುಕುಮಾರರು ನಾಟಕದಲ್ಲಿ ದೇಯಿಯ ಸಾವನ್ನು ಸಹಜ ಸಾವೆಂದು ಪ್ರತಿಬಿಂಬಿಸಿ, ಬೊಮ್ಮಯ ಮತ್ತು ಸಾಂತಯನ ಮಾತುಗಳಲ್ಲಿ ಸಂಚಿನ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಸಿನೆಮಾದಲ್ಲಿ ದೇಯಿಯು ಮದ್ದು ಕೊಡುವ ಇನ್ನೊಬ್ಬ ಹೆಂಗಸಿನ ಮಾತ್ಸರ್ಯಕ್ಕೆ ಮತ್ತು ಮಂತ್ರಿ ಬುದ್ಯಂತನ ದ್ವೇಷಕ್ಕೆ ಬಲಿಯಾಗುತ್ತಾಳೆ. ಈ ಮೂಲಕ ಅವಳದು ಅಸಹಜ ಸಾವು, ಬಡ ವಿಧವೆ ಹೆಣ್ಣು ಮಗಳೊಬ್ಬಳು ಮೇಲ್ವರ್ಗದವರ ಸೇಡಿಗೆ ಬಲಿಯಾಗುತ್ತಾಳೆ. ಪಾಡ್ದನಗಳಲ್ಲಿ ಇರುವ ಪಾಠಂತರಗಳನ್ನು ಕಲೆಯ ಅಭಿವ್ಯಕ್ತಿಗೆ ಅನುಗುಣವಾಗಿ ವಿಶುಕುಮಾರರು ಬದಲಾಯಿಸಿಕೊಂಡಿದ್ದಾರೆ.

1973ರಲ್ಲಿ ಬಿಡುಗಡೆಯಾದ 'ಕೋಟಿ ಚೆನ್ನಯ' ಸಿನೆಮಾವನ್ನು ವಿಶುಕುಮಾರರು ಸಮಕಾಲೀನ ಸೌಲಭ್ಯಗಳನ್ನೆಲ್ಲಾ ಬಳಸಿಕೊಂಡು ನಿರ್ಮಿಸಿದ್ದರು. ಆಗಿನ ತಂತ್ರಜ್ಞಾನದ ಕಪ್ಪು ಬಿಳುಪು ಸಿನೆಮಾ. ಕನ್ನಡ ಮತ್ತು ಇತರ ಭಾಷೆಯ ಚಲನಚಿತ್ರಗಳಿಗೆ ಕಡಿಮೆ ಇಲ್ಲದಂತೆ ಚೆನ್ನೈಯಲ್ಲಿ ಅದ್ದೂರಿಯಾಗಿಯೇ ಚಿತ್ರೀಕರಿಸಿಕೊಂಡಿದ್ದರು. ಸಿನೆಮಾಗೆ ತಕ್ಕುದಾದ ದೃಶ್ಯಗಳನ್ನು ಸಂಯೋಜಿಸುವಲ್ಲಿಯೂ ಯಶಸ್ವಿಯಾಗಿದ್ದಾರೆ. ತುಳುನಾಡಿನ ಪರಂಪರೆಯ ಜೀವನಾಡಿಯಾದ ಕಾಡು, ಗದ್ದೆಗಳು, ಉಳುವ, ಗೊಬ್ಬರ ಹಾಕುವ, ಬಿತ್ತುವ ಮುಂತಾದ ಕೃಷಿ ಚಟುವಟಿಕೆಗಳನ್ನು ಚಿತ್ರದಲ್ಲಿ ಯಶಸ್ವಿಯಾಗಿ ತಂದಿದ್ದಾರೆ. ಈ ಮೂಲಕ ರಂಗದ ಸೀಮಿತತೆಯನ್ನು ಚಲನಚಿತ್ರದಲ್ಲಿ ತುಂಬಿಸಿಕೊಂಡಿದ್ದಾರೆ.

ಕೇವಲ ಲೌಕಿಕ ಕಥಾ ವಸ್ತುವಿನಂತೆಯೇ ಇಡೀ ಸಿನೆಮಾ ಪ್ರಸ್ತುತಗೊಳ್ಳುತ್ತದೆ. ಕೋಟಿ ಚೆನ್ನಯರು ತುಳುನಾಡಿನ ಸಾಮಾನ್ಯ ವರ್ಗದ ಅವಳಿ ಮಕ್ಕಳಾಗಿ ಬೆಳೆದು ಅನ್ಯಾಯಕ್ಕೆ ತುತ್ತಾದವರಾಗಿ ಕಂಡುಬರುತ್ತಾರೆಯೇ ಹೊರತು ಅತಿಮಾನುಷ ಶಕ್ತಿಯಿರುವ ವ್ಯಕ್ತಿಗಳಾಗಿ ಅಥವಾ ದೈವಸಂಭೂತರಾಗಿ ಅಭಿವ್ಯಕ್ತಿಗೊಂಡಿಲ್ಲ. ರಂಗಪ್ರಯೋಗದಲ್ಲಿಯೂ, ಚಲನಚಿತ್ರದಲ್ಲಿಯೂ ಇದನ್ನು ತರುವ ಅಗತ್ಯ ವಿಶು ಕುಮಾರರಿಗೆ ಕಂಡು ಬರುವುದಿಲ್ಲ. ಸಿನಿಮಾದಲ್ಲಿ ಕೋಟಿ ಚೆನ್ನಯರ ಪ್ರತಿಬಿಂಬಗಳನ್ನು ಮತ್ತು ಕೋಟಿ ಚೆನ್ನಯರ ಸಾಮಾನ್ಯ ಆರಾಧನೆಗಳನ್ನು ಮಾತ್ರ ಅಲ್ಲಲ್ಲಿ ತರಲಾಗಿದೆ. ನಾಟಕ ಅಥವಾ ಚಿತ್ರ ಯಾವುದೇ ದೈವ ಪ್ರದರ್ಶನವನ್ನು ಒಳಗೊಂಡಿಲ್ಲ. ಕೋಟಿ ಚೆನ್ನಯರು ದೈವೀ ಸಂಭೂತರು ಎನ್ನುವ ಧ್ವನಿ ಎಲ್ಲೂ ವ್ಯಕ್ತವಾಗುವುದಿಲ್ಲ. ಯುದ್ಧದ ದೃಶ್ಯಗಳನ್ನೂ ತರಲಾಗಿದೆ. ಚಿತ್ರಕ್ಕೆ ಹೊಂದುವ ಹಾಗೆ ಗುಡ್ಡ–ಬೆಟ್ಟಗಳಲ್ಲಿ ಅದನ್ನು ಚಿತ್ರೀಕರಿಸಿ ಚಲನಚಿತ್ರಕ್ಕೆ ನ್ಯಾಯವನ್ನು ಒದಗಿಸಿದ್ದಾರೆ.

'ಕೋಟಿ ಚೆನ್ನಯ' ಕತೆಯು ತುಳುನಾಡಿನ ಜಮೀನ್ದಾರಿ ಸಮಾಜದ ಪ್ರತಿಬಿಂಬವಾಗಿದೆ. ಭೂಮಿಯ ಒಡೆತನ ಜೈನರದ್ದಾಗಿತ್ತು. ಅವರು ರಾಜರಂತೆ ಅಧಿಕಾರ ನಡೆಸುತ್ತಿದ್ದರು, ಉಳಿದ ವರ್ಗದವರಿಂದ ಗೌರವ ಪಡೆದುಕೊಳ್ಳುತ್ತಿದ್ದರು. ಅವರ ಕೈಕೆಳಗೆ ಬಂಟ ಸಮುದಾಯದವರು ಮಂತ್ರಿಗಳಾಗಿ, ಆಡಳಿತ ನಾಯಕರಾಗಿದ್ದು ನಿಜವಾದ ಕಾರುಬಾರು ನಡೆಸುತ್ತಿದ್ದರು. ಜೈನರ ಭೂಮಿಯನ್ನು ಗೇಣಿಗಾಗಿ ಪಡೆಯುತ್ತಿದ್ದ ಅವರು ಕೃಷಿ ಒಕ್ಕಲಿಗರಾಗಿ ಸಮಾಜದ ಬೇರೆ ವರ್ಗದವರನ್ನು ಒಳಗೊಳ್ಳಿಸಿ ಕೃಷಿ ಚಟುವಟಿಕೆ ನಡೆಸುತ್ತಿದ್ದರು. ಹಾಗಾಗಿಯೇ ಜಮೀನ್ದಾರ ನಾಮಕಾವಸ್ಥೆಗೆ ಮಾತ್ರ ಇದ್ದು ಭೂ ಒಡೆಯರಾಗಿ ದರ್ಪ ತೋರುತ್ತಿದ್ದವರು ಬಂಟರು. ಮೂಲಗೇಣಿ, ಚಾಲಗೇಣಿ ಎರಡು ಬಗೆಯ ಒಕ್ಕಲುತನ ಹೊಂದಿದ್ದರು. ಹೀಗಾಗಿ ಜಮೀನ್ದಾರನೊಂದಿಗೆ ನೇರ ಸಂಪರ್ಕ ಇರುತ್ತಿದ್ದುದು ಇವರಿಗೆ ಮಾತ್ರ. ವ್ಯವಹಾರಗಳು ಇವರಲ್ಲೇ ನಡೆಯುತ್ತಿದ್ದವು. 'ಕೋಟಿ ಚೆನ್ನಯ'ದಲ್ಲಿ ಬುದ್ಯಂತನ ಮಾತನ್ನು ಮೀರಲಾಗದ ಬಲ್ಲಾಳನ ಅಸಹಾಯಕತೆಯನ್ನು ನಾವು ಕಾಣಬಹುದು. ಕೃಷಿ ಒಡೆತನ ಪಡೆಯಲು ಅವಕಾಶವಿಲ್ಲದ ಸಮುದಾಯದ ಯುವಕರಿಬ್ಬರು ಅದನ್ನು ಬಯಸಿದಾಗ ಸಮಾಜದ ಮೇಲ್ವರ್ಗ ಹೇಗೆ ನಿರಾಕರಿಸಿ ಅವರನ್ನು ಶೋಷಣೆಗೆ ಒಳಪಡಿಸಿತು ಎನ್ನುವುದು ತಿಳಿಯುತ್ತದೆ.

**ಗಣಪಯ್ಯ ಶೆಟ್ಟರ 'ಕೋಟಿ ಚೆನ್ನಯ':**

90ರ ದಶಕದಲ್ಲಿ ಪ್ರಕಟವಾದ ಸೀತಾನದಿ ಗಣಪಯ್ಯ ಶೆಟ್ಟಿ ಅವರ 'ಕೋಟಿ–ಚೆನ್ನಯ' ನಾಟಕವು ವಿಶುಕುಮಾರ್ ಅವರ ನಾಟಕಕ್ಕಿಂತ ಹಲವು ದೃಷ್ಟಿಕೋನಗಳಿಂದ ವಿಭಿನ್ನವಾಗಿ ಕಂಡು ಬರುತ್ತದೆ. ಇವರ 'ಕೋಟಿ ಚೆನ್ನಯ' ಸಾಮಾಜಿಕ ಅಸಮಾನತೆಯನ್ನು ಅದರಲ್ಲೂ ಮುಖ್ಯವಾಗಿ ಬಿಲ್ಲವರ ಮತ್ತು ಬಂಟರ ನಡುವಿನ ಸಾಮಾಜಿಕ ಅಂತರವನ್ನು

ಬಿಚ್ಚುತ್ತಾ ಹೋಗುತ್ತದೆ. ಜೈನರಿಗೆ ಇಲ್ಲದ ಘರ್ಷಣೆ ಬಂಟ–ಬಿಲ್ಲವ ಸಮುದಾಯದ ನಡುವೆ ಕಂಡು ಬರುತ್ತದೆ. ನಾಟಕದ ಮೊದಲ ದೃಶ್ಯದಲ್ಲಿ ಬಂಟ ಬೊಮ್ಮಯ್ಯನ ಮತ್ತು ಬೈದ್ಯ ಸಾಯನನ ಮಾತುಗಳಲ್ಲಿಯೇ ಇದು ವ್ಯಕ್ತವಾಗುತ್ತದೆ. ಕುದ್ಮುಲ್ ರಂಗರಾವ್ ಅವರಂತಹ ಸಮಾಜ ಸುಧಾರಣೆಯ ಪರಿಣಾಮವಾಗಿ ಮುಂದುವರಿದ ಕರಾವಳಿ ಭಾಗಗಳಲ್ಲಿ ಇಲ್ಲದ ಈ ಅಸಮಾನತೆಯ ಒಳನೋಟ ಒಳ ತುಳುನಾಡಿನಲ್ಲಿ ಇದ್ದುದನ್ನು ಅಭಿವ್ಯಕ್ತಗೊಳಿಸುತ್ತದೆ. 'ನನ ಮೇಲ್–ಕೀಳ್, ಬಡವೆ–ಮಲ್ಲಯೆ ಓಲುಂಡು. ಬುದ್ಯಂತೆ ಮಂತ್ರಿಯಾದುಪ್ಪುನಗ ಅಂಚ ಆವೆರೆ ಬುಡುವೆನಾ?' ಎನ್ನುವ ಬುದ್ಯಂತನ ಮಾತುಗಳಲ್ಲಿ ಜಾತಿ ಭೇದದ ತೀವ್ರತೆಯನ್ನು ಗಮನಿಸಬಹುದು. ಇದರಲ್ಲಿ ಬರುವ ಗಾದೆ–ನುಡಿಗಟ್ಟುಗಳಲ್ಲೂ ಅದು ಧ್ವನಿಸುವುದನ್ನು ಕಾಣಬಹುದು.

'ತೌಡುಗು ಪೊಲಿ ಇಜ್ಜಿ; ತಾರೊಗು ಬಡ್ಡಿ ಇಜ್ಜಿ'

'ಪುಚ್ಚೆ ದಾಂತಿ ಕಲೊಟ್ಟು ಎಲಿ ಲಾಗ ಪಾಡ್ದುಂಡು'

'ದಾಂತಿನಕ್ಲೆಗ್ ಗಾಢ ಎಚ್ಚ; ನೀರ ಕಳಿಕ್ಕ್ ನೊರೆ ಎಚ್ಚ'

'ನಾಯಿಡ್ದ್ ಎಚ್ಚ ಬಾಯಿ; ಮಾಯೊಡ್ದು ಎಚ್ಚ ಮಜಕೆ'

ಬುದ್ಯಂತ ಬೊಮ್ಮಯನಿಗೆ, 'ಬಿರುವೆರೆ ಬೊಜ್ಜೊಗು ಪೋತ ಪಂಡುದು ಜಾತಿಡೇ ಕಟ್ಟ್ ಕೊರ್ಪಾವೆ' (ಬಿರುವರ ಜಾತಿಯವರ ಉತ್ತರಕ್ರಿಯೆಗೆ ಹೋಗಿದ್ದಿ ಎಂದು ಜಾತಿಯವರಿಂದ ಹೊರಗೆ ಹಾಕಿಸುತ್ತೇನೆ) ಎಂದು ಹೆದರಿಸುತ್ತಾನೆ.

ಶೆಟ್ಟರ ನಾಟಕದ ಸಾಯನ ಕೃಷಿ ಭೂಮಿಯನ್ನು ಗೇಣಿಗೆ ದುಡಿಯುವವನು, ಅಂದರೆ ಕೋಟಿ–ಚೆನ್ನಯರಿಗಿಂತ ಮೊದಲೇ ಬಿಲ್ಲವರಿಗೆ ಭೂಮಿಯ ಒಡೆತನದ ಹಕ್ಕಿದ್ದಿತು ಎಂದು ತಿಳಿಸುತ್ತದೆ. ಅದರಲ್ಲೂ ಶೆಟ್ಟರ ಸಾಯನ ಜಮೀನ್ದಾರನಿಗೆ ಗೇಣಿ ಕೊಡದೆ ಸತಾಯಿಸುವ ಚಾಣಾಕ್ಷ. ಮಂತ್ರಿ ಮಾಗಧರಿಗೆ ತಗ್ಗಿ ಬಗ್ಗಿ ನಡೆಯುವ ವಿಧೇಯನಲ್ಲ; ಮಾತಿಗೆ ಮಾತು ಕೂಡಿಸಿ ಉತ್ತರ ನೀಡಬಲ್ಲ ಸಮರ್ಥ. ವಿಶು ಕುಮಾರರ ನಾಟಕ–ಸಿನೆಮಾಗಳೆರಡರಲ್ಲೂ ಸಾಯನ ಕಣ್ಣುಕಾಣದ ಅನಾರೋಗ್ಯದಿಂದ ಬಳಲುವ ಬಡವ.

ಗಣಪಯ್ಯರ ನಾಟಕ ರಚನೆಗೊಂಡ 90ರ ದಶಕದಲ್ಲಿ ಅದಾಗಲೇ ಭೂಮಸೂದೆ ಜಾರಿಗೊಂಡು ಉಳುವವರೇ ಭೂಮಿಯ ಹಕ್ಕನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಭೂಮಸೂದೆ ಜಾರಿಯಾದಾಗ ಭೂ ಒಡೆತನ ಪಡೆದ ಬಿಲ್ಲವರು ಕರಾವಳಿಯಲ್ಲಿ ಕೆಲವೆಡೆ ಕಾಣಸಿಗುತ್ತಾರೆ. ಜೊತೆಗೆ ಕೆಲವು ಭೂಒಡೆಯರು ಮುಂಚಿತವಾಗಿ ಮಸೂದೆಯ ಜಾರಿ ಕುರಿತ ವಾಸನೆ ತಿಳಿದು ಒಕ್ಕಲೆಬ್ಬಿಸಿದ ಉದಾಹರಣೆಗಳೂ ಇವೆ. ಬುದ್ಯಂತ ಮತ್ತು ಬೊಮ್ಮಯ್ಯನ ಮಾತುಗಳಲ್ಲಿ ಬಿಲ್ಲವರ ಭೂ ಒಡೆತನದ ಬಗೆಗಿನ ಅಸಮಾಧಾನವನ್ನು ಕಾಣಬಹುದು.

ಇವರ ನಾಟಕದ ಜೋಯಿಸರು ಮತ್ತು ಮಲಯಾಳಿ ಪಂಡಿತ ಈ ಎರಡು ಪಾತ್ರಗಳು ತುಳುನಾಡಿನಲ್ಲಿ ಆ ಕಾಲದಲ್ಲಿ ಪ್ರಚಲಿತದಲ್ಲಿದ್ದ ಮಾಟ–ಮಂತ್ರವೆಂಬ ಮೂಢನಂಬಿಕೆಯ ಬಗೆಗೆ ಬೆಳಕು ಚೆಲ್ಲುತ್ತದೆ. ವಿಶು ಕುಮಾರರ ನಾಟಕ–ಸಿನೆಮಾದಲ್ಲಿಲ್ಲದ ಈ ಎರಡು ಪಾತ್ರಗಳು ಹಲವಾರು ದೃಶ್ಯಗಳಿಗೆ ಜೀವ ತುಂಬುತ್ತವೆ. ದೇಯಿಯು ಬುದ್ಯಂತ ಮಂತ್ರಿಯ ಮಾಟ–ಮಂತ್ರಕ್ಕೆ ತುತ್ತಾಗಿ ತೆಂಗಿನ ಗರಿ ಬಿದ್ದು ಸತ್ತು ಹೋದಳು ಎಂಬ ಕೆಲವು ಪಾಡ್ದನದ ಕಥೆಗೆ ಅನುಗುಣವಾಗಿ ಈ ಪಾತ್ರಗಳು ಕಾರ್ಯನಿರ್ವಹಿಸುತ್ತವೆ.

ಇವರು ದೇಯಿಯ ಪಾತ್ರವನ್ನು ದೈವೀಕರಿಸಿದ್ದಾರೆ. ಬಲ್ಲಾಳನ ಮಾತುಗಳಲ್ಲಿ ಅವಳು ದೇವಿ ಎಂದೇ ಪರಿಗಣಿಸಲ್ಪಡುವುದು, ಅವಳಿಗೆಂದು ಕಳುಹಿಸಿದ ದಂಡಿಗೆಯಲ್ಲಿ ಮದ್ದು ಇಟ್ಟಾಗ ಭಾರವಾಗುವುದು, ಅವಳ ಸ್ಪರ್ಶದಿಂದ ಸಲೀಸಾಗಿ ಎತ್ತಲಾಗುವುದು, ಅವಳಿಗೆ ಸೇಜ ಕೊಡಲು ಬಲ್ಲಾಳನು ಬುದ್ಯಂತನ ಒಪ್ಪಿಗೆ ಬೇಕೆಂದಾಗ ಅವಳು ಕೋಪದಿಂದ ಬೂಡು ಇಳಿದು ಹೋದ ಪರಿಣಾಮ ಬಲ್ಲಾಳ ಮತ್ತೆ ಅನಾರೋಗ್ಯಕ್ಕೀಡಾಗುವುದು ಮುಂತಾದ ಅತಿಮಾನುಷ ಶಕ್ತಿಗಳನ್ನು ತೋರುತ್ತಾಳೆ. ಇವರ ನಾಟಕದಲ್ಲಿ ದೇಯಿ ವಿಧವೆಯಲ್ಲ. ಅವಳ ಗಂಡ ಕಾಂತಣ್ಣ ಗಟ್ಟಕ್ಕೆ ಹೋಗಿರುತ್ತಾನೆ. ಈ ಮೂಲಕ ಅವಳನ್ನು ಅಮಂಗಳೆಯಾಗಿಸುವುದಿಲ್ಲ.

ಆದರೆ ಕೋಟಿ ಚೆನ್ನಯ ಪಾತ್ರವನ್ನು ಲೌಕಿಕವಾಗಿಯೇ ನಾಟಕದುದ್ದಕ್ಕೂ ಅಭಿವ್ಯಕ್ತಪಡಿಸಿದ್ದಾರೆ. ಅತಿಮಾನುಷ ಶಕ್ತಿಯನ್ನು ಕೋಟಿ ಚೆನ್ನಯರು ಎಲ್ಲೂ ತೋರುವುದಿಲ್ಲ. ಬೆರ್ಮೆರ ಗುಡಿಯೂ ಅವರ ಭಕ್ತಿಯಿಂದಾಗಿ ತೆರೆದುಕೊಳ್ಳುತ್ತದೆ. 'ಸಮಾಜದ ವ್ಯಕ್ತಿಗಳು ದೂರ ಮಾಡಿದರೂ ದೇವರು ಕೈಬಿಡಲಿಲ್ಲ' ಎಂಬ ತಾತ್ವಿಕತೆಗೆ ಅದು ಸೀಮಿತವಾಗುತ್ತದೆ. ನಾಟಕದ ಕೊನೆಗೆ ಬಲ್ಲಾಳರ ಮಾತುಗಳಲ್ಲಿ ಗೊಂಬೆ ಮಾಡಿಸುವ, ಗುಡಿ ಕಟ್ಟುವ ಬಗೆಗೆ ಮಾತ್ರ ಬರುತ್ತದೆ. ಅಲ್ಲಿ ದೈವತ್ವದ ಕುರುಹು ಇದೆ. ಮತ್ತೊಂದು, ವಿಶುಕುಮಾರರ 'ಕೋಟಿ ಚೆನ್ನಯ'ದ ಕತೆಗೆ ಭಿನ್ನವಾಗಿ ಅಣ್ಣ ತಮ್ಮರು ತಿಳಿದೇ ಅಕ್ಕನನ್ನು ಹುಡುಕಿಕೊಂಡು ಪಯ್ಯ ಬೈದ್ಯನ ಮನೆಗೆ ಬರುತ್ತಾರೆ.

**ಉಪಸಂಹಾರ:**

ಜನಪದ ಸಿದ್ಧ ಕತೆಯೊಂದು ಇದ್ದರೂ ಸೃಜನಶೀಲ ಸಾಹಿತ್ಯಕ್ಕೆ ತರುವಾಗ ಅದರಲ್ಲಿನ ಒಳನೋಟಗಳು ಭಿನ್ನತೆಯನ್ನು ಪಡೆದುಕೊಳ್ಳುತ್ತವೆ. ಬರಹಗಾರನ ಬದುಕು, ಆ ಕಾಲಘಟ್ಟದ ರಾಜಕೀಯ–ಸಾಮಾಜಿಕ ಸಂಗತಿಗಳು, ಪ್ರಾದೇಶಿಕ ಅನನ್ಯತೆಗಳು ಬರಹದ ಮೇಲೆ ಬರಹಗಾರನಿಗೆ ಅರಿವಿಲ್ಲದೆಯೂ ಪ್ರಭಾವ ಬೀರಿರುತ್ತವೆ. ಕೋಟಿ ಚೆನ್ನಯ ಕಥೆಯು ತುಳುನಾಡಿನಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿರುವ ಬಿಲ್ಲವ ಸಮುದಾಯದ ಅಸ್ಮಿತೆಯ ಸಂಕೇತವಾಗಿ ಮೂಡಿ ಬಂದಿರುವಂತೆಯೇ ಹಿಂದಿನ ತುಳುನಾಡಿನಲ್ಲಿ ಆ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು ಬರಹಗಾರನ ಕಾಲಕ್ಕೆ–ಸಮಾಜಕ್ಕೆ ಪೂರಕವಾಗಿ ಅಭಿವ್ಯಕ್ತಗೊಳ್ಳುತ್ತಾ ಹೋಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ವಿಶುಕುಮಾರ್, (1967), ಕೋಟಿ ಚೆನ್ನಯ – ತುಳು ಚಾರಿತ್ರಿಕ ನಾಟಕ, ಮಂಗಳೂರು: ಕೆನರಾ ಪ್ರಿಂಟಿಂಗ್ ವರ್ಕ್ಸ್.
2. ಸೀತಾನದಿ ಗಣಪಯ್ಯ ಶೆಟ್ಟಿ, (1981), ಕೋಟಿ ಚೆನ್ನಯ – ತುಳು ನಾಟಕ, ಹಿರಿಯಡಕ (ದ.ಕ.): ಸುಬೋಧ ಸಾಹಿತ್ಯ ಭಂಡಾರ.
3. ಗೋವಿಂದ ರಾವ್ ಜಿ. ಕೆ., (2003), ಶೇಕ್ಸ್‌ಪಿಯರ್ – ಎರಡು ನಾಟಕಗಳ ಅಧ್ಯಯನ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
4. ಮುದ್ದು ಮೂಡುಬೆಳ್ಳೆ, (2005), ತುಳು ರಂಗಭೂಮಿ, ಮಂಗಳೂರು (ಉರ್ವ): ಸಾಹಿತ್ಯ ಸಂಸ್ಕೃತಿ ವೇದಿಕೆ.
5. ಮಾಧವ ಎಂ. ಕೆ., (2021), ಬೊಳ್ಳಿ ಸಂಬ್ರಮೊ – ಉಪನ್ಯಾಸ ಮಾಲೆ, ಮಂಗಳೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ, ಮಂಗಳೂರು ವಿಶ್ವವಿದ್ಯಾನಿಲಯ.
6. ವಿವೇಕ್ ರೈ ಬಿ. ಎ., (2007), ತುಳು ಸಾಹಿತ್ಯ ಚರಿತ್ರೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.
7. ವಿಶುಕುಮಾರ್, (1973), ಕೋಟಿ ಚೆನ್ನಯ ತುಳು ಸಿನೆಮಾ, ಪ್ರಜಾಫಿಲಂಸ್ ಬ್ಯಾನರ್ಸ್.
8. ಶಿವರಾಮ ಶಿಶಿಲ, (1987), ಕೋಟಿ ಚೆನ್ನಯ ಮಕ್ಕಳ ನಾಟಕ, ಕಿನ್ನಿಗೋಳಿ: ಯುಗಪುರುಷ ಪ್ರಕಟಣಾಲಯ.
9. ಕದ್ರಿ ನವನೀತ ಶೆಟ್ಟಿ, (2014), ಬಿರ್ದೌದ ಬೀರೆರ್ ಕೋಟಿ ಚೆನ್ನಯೇರ, ಮಂಗಳೂರು: ಗುತ್ತು ಪ್ರಕಾಶನ.